ಮೈಸೂರಿಗರಾದ ಶಶಿಕುಮಾರ್, ಹೊಸದೆಹಲಿಯಲ್ಲಿರುವ 'ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ ಇಂಡಿಯಾ'ದಲ್ಲಿ ಕಮಿಶನಿಂಗ್ ಎಡಿಟರ್ ಆಗಿ ಅನುವಾದ ಯೋಜನೆಗಳ ಮೇಲ್ವಿಚಾರಣೆ ನೋಡಿಕೊಂಡವರು. ಸದ್ಯ ಕೆನಡಾದ ಆಲ್ಬರ್ಟಾ ವಿಶ್ವವಿದ್ಯಾಲಯದಲ್ಲಿ 'ಕರ್ನಾಟಕ ದಲಿತ ಸಾಹಿತ್ಯ ಹಾಗೂ ಚಳವಳಿಯ ಇತಿಹಾಸ' ಕುರಿತು ಸಂಶೋಧನೆ ನಡೆಸಿದ್ದಾರೆ. ಸಾಹಿತ್ಯ ಹಾಗೂ ಸಂಸ್ಕೃತಿ ಇತಿಹಾಸದಲ್ಲಿ ತೊಡಗಿಸಿಕೊಂಡಿರುವ ಅವರ ಮುಂಬರಲಿರುವ ಪುಸ್ತಕ 'ಕ್ರಿಟಿಕಲ್ ಡಿಸ್ಕೋರ್ಸ್ ಇನ್ ಕನ್ನಡ.'

ದಬ್ಬಾಳಿಕೆ, ಅತ್ಯಾಚಾರ, ಕ್ರೌರ್ಯ, ಕೊಲೆ, ಹಿಂಸಾಚಾರಗಳ ಬಗ್ಗೆ ಸಿಡಿದೆದ್ದು ಗೌರವ, ಘನತೆ, ಸಮಾನತೆಗಾಗಿ ಹೋರಾಡುವ ಸಂಕಲ್ಪ, ಚಾರಿತ್ರಿಕ ಪ್ರಜ್ಞೆಯಿಂದ ಹುಟ್ಟಿರುವಂತದ್ದು. ತಮ್ಮ ಶೋಷಣೆಯ ಬಗ್ಗೆ ಅರಿವಿಲ್ಲದವರು ಅಸ್ಪೃಶ್ಯ ಜಾತಿಗಳಲ್ಲೇ ಹುಟ್ಟಿದ್ದರೂ ದಲಿತರಾಗಲು ಸಾಧ್ಯವಿಲ್ಲ. ಹಾಗಾಗಿ, ದಲಿತರಾಗುವುದೆಂದರೆ, ಲೋಕಚಿಂತಕರಾಗುವುದು ಎಂದರ್ಥ ಹೇಳಿದೆ. ಇದು ಮಾಧ್ಯಮಗಳ ಸುದ್ದಿಗಳಲ್ಲಿ ದಿನಬೆಳಗಾದರೆ ಕಾಣಿಸಿಕೊಳ್ಳುವ ದಲಿತನಷ್ಟು ಸರಳ ಅರ್ಥ ಹೊಂದಿರುವಂತಹದ್ದಲ್ಲ. 'ದಲಿತ್ ಪ್ಯಾಂಥರ್ಸ್'ನಿಂದ ಆರಂಭಗೊಂಡು ಇಂದಿನವರೆಗೂ ದಲಿತ ಚಳವಳಿಗಳು ತೋರಿಸಿಕೊಟ್ಟಿರುವುದು ಅದನ್ನೇ ಎಂದು ತುಸು ಆವೇಶದಿಂದ ಸೈದ್ಧಾಂತಿಕ ವಾದ ಮಂಡಿಸಿದೆ. ಅವರಿಗೆ ನನ್ನ ವಾದ ಹೇಗನ್ನಿಸಿತೆಂಬುದುರ ಬಗ್ಗೆ ಯೋಚಿಸಲು ಹೋಗಲಿಲ್ಲ. ಇನ್ನು ರವಿದಾಸೀಯರೇ ಆಗಲಿ, ಯಾರೇ ಆಗಲಿ, ದಲಿತರಾಗಲು ಅಂಬೇಡ್ಕರ್ ವಾದಿಗಳಾಗಲೇಬೇಕಾದ ಜರೂರೇನೂ ಇಲ್ಲ ಎಂದು ನಾನು ಹೇಳಿದಾಗ ಅವರು ತುಸು ವಿಚಲಿತರಾದರಂತೆ ಕಂಡರು. ಒಂದು ವೇಳೆ ಬಾಬಾಸಾಹೇಬ್ ಮಹಾರ್ ಆಗಿ ಮಹಾರಾಷ್ಟ್ರದಲ್ಲಿ ಹುಟ್ಟದೆ, ತಮ್ಮ ಜೀವನದ ಕೊನೆಯಲ್ಲಿ ಬೌದ್ಧದೀಕ್ಷೆಯನ್ನು ಸ್ವೀಕರಿಸದೆ, ಪಂಜಾಬ್‌ನಲ್ಲಿ ರವಿದಾಸೀಯ ಆಗಿ ಹುಟ್ಟಿದ್ದಿದ್ದರೆ? ಎಂದು ಕೇಳಿದೆ. ಆಗ ಅವರು ಉತ್ತರಿಸಲಾಗದೆ ಮೌನ ತಾಳಿದರು. ಆ ಪ್ರಶ್ನೆ ಕೇಳಲು ಕಾರಣ, ಮರಾಠಿ ದಲಿತರು – ಅಂಬೇಡ್ಕರ್, ದಲಿತತ್ವ ಹಾಗೂ ಬೌದ್ಧಮತವನ್ನು ರವಿದಾಸೀಯರನ್ನು ಯಾವ ಕಾರಣಕ್ಕೆ ಟೀಕಿಸುತ್ತಿದ್ದಾರೆಯೋ ಅದೇ ಭಾವುಕತೆಯಿಂದ ತಾವೇ ವರ್ತಿಸುತ್ತಿರುವುದರ ಹಿಂದಿನ ಸೋಜಿಗವನ್ನು ಅರ್ಥಮಾಡಿಸುವುದಾಗಿತ್ತು. ಅದಕ್ಕೆ ಮಾತನ್ನು ಅಂಬೇಡ್ಕರ್ ಬಾಲ್ಯ ಹಾಗೂ ಕುಟುಂಬದೆಡೆಗೆ ತಿರುಗಿಸಿದೆ.

ಅಂಬೇಡ್ಕರ್ ಕುಟುಂಬ ಕೂಡ ರಾಮದಾಸ್ ಹಾಗೂ ಕಬೀರ್ ಪಂಥಿಗಳಾಗಿದ್ದವರು. ಹಾಗಾಗಿ ಅವರಿಗೆ ಬಾಲ್ಯದಿಂದಲೂ ಆಧ್ಯಾತ್ಮಿಕ ಮಾರ್ಗದರ್ಶನವಿದ್ದೇ ಇತ್ತು. ಹೆಚ್ಚು ಹೆಚ್ಚು ಶಿಕ್ಷಣ ಪಡೆಯುತ್ತ ಹೋದಂತೆ, ಅದರಲ್ಲೂ ಪಾಶ್ಚಿಮಾತ್ಯ ಶಿಕ್ಷಣವನ್ನು ಪಡೆದಂತೆಲ್ಲ, ಅವರಲ್ಲಿನ ಆಧ್ಯಾತ್ಮಿಕ ಹುಡುಕಾಟಕ್ಕೆ ವೈಚಾರಿಕ ದೃಷ್ಟಿಕೋನ ದೊರಕಿತು. ಅದರಿಂದಾಗಿ ಅವರು ಎಲ್ಲವನ್ನು ಪ್ರಶ್ನಿಸಲಾರಂಭಿಸಿದರು. ಆ ಕಾರಣಕ್ಕೆ ಅವರಿಗೆ ಮಹಾನ್ ವೈಚಾರಿಕನಾದ ಬುದ್ಧ ಮುಖ್ಯವೆನಿಸಿದ್ದು. ಭಕ್ತಿ ಚಳವಳಿಯ ಬಗ್ಗೆ ಅವರಿಗಿದ್ದ ಬಹುದೊಡ್ಡ ತಕರಾರೆಂದರೆ, ಅದು ದೇವರ ಮುಂದೆ ಮಾನವರೆಲ್ಲರು ಸಮಾನರು ಎಂದು ಹೇಳಿತೇ ಹೊರತು, ಮಾನವರೆಲ್ಲರು ಸಮಾನರು ಎಂಬ ತತ್ವವನ್ನು ಸಾರುವುದಿಲ್ಲ. ಆ ಕಾರಣಕ್ಕೆ ಜಾತಿ ನಿರ್ಮೂಲನೆ ಭಕ್ತಿಪಂಥಕ್ಕೆ ಮುಖ್ಯವಾಗಲಿಲ್ಲ ಎಂಬುದಾಗಿತ್ತು. ಜಾತಿಯ ಬಗ್ಗೆ ಅಂಬೇಡ್ಕರ್ 1916ರಲ್ಲಿ ಮೊದಲ ಬಾರಿಗೆ ಅಮೆರಿಕದ ಕೊಲಂಬಿಯ ವಿಶ್ವವಿದ್ಯಾಲಯದಲ್ಲಿ ಪ್ರಬಂಧ ಮಂಡಿಸಿದರಾದರೂ, ಅದು ಜಾತಿ ನಿರ್ಮೂಲನೆಯ ರಾಜಕೀಯ ಆಧ್ಯಾತ್ಮಿಕ ಹುಡುಕಾಟವಾಗಿ ಮಾರ್ಪಾಡಾಗಲು ದಶಕಗಳೇ ಬೇಕಾದವು. ಮುಂದಿನ ಎರಡು ದಶಕಗಳ ಕಾಲ ಹಿಂದೂಮತದೊಂದಿಗಿನ ಅವರ ತಕರಾರು ಮುಂದುವರಿದೇ ಇತ್ತಾದರೂ ತೊರೆಯುವ ಆಲೋಚನೆಯೇನೂ ಇರಲಿಲ್ಲ. ಅಂತಹ ಆಲೋಚನೆ ಮೊದಲು ಪ್ರಕಟಗೊಂಡಿದ್ದು 1935ರಲ್ಲಿ, ಅಕ್ಟೋಬರ್ 13ರಂದು. ಯವೋಲದಲ್ಲಿ ನಡೆದ 'ಬಾಂಬೆ ಪ್ರೆಸಿಡೆನ್ಸಿ ಡಿಪ್ರೆಸ್ಡ್ ಕ್ಲಾಸಸ್ ಸಮಾವೇಶ'ದಲ್ಲಿ 10,000